ಶ್ರೀ ಟಿ.ಬಿ. ಜಯಚಂದ್ರ : ಹೊರಗುತ್ತಿಗೆ ನೌಕರರನ್ನು ಖಾಯಂಗೊಳಿಸುವ ಬಗ್ಗೆ ಇಲ್ಲಿ ತಮ್ಮ ಪತ್ರ ಇರುವುದು.

ಶ್ರೀ ಎಂ.ಟಿ. ಕೃಷ್ಣಪ್ಪ : ಆಯಿತು, ಅದರ ಬಗ್ಗೆ ಹೇಳಿ.

ಅಧ್ಯಕ್ಷರು : ಇದಕ್ಕೆ ಉತ್ತರ ಇದೆಯೇ ?

ಶ್ರೀ ಟಿ.ಬಿ. ಜಯಚಂದ್ರ : ಇಲ್ಲ ಅದಕ್ಕೆ ಉತ್ತರ ಬರಬೇಕು.

ಅಧ್ಯಕ್ಷರು : ಆಯಿತು, ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನ ಕಲಾಪವು ರಾತ್ರಿ 8.00 ಗಂಟೆಗೆ ಮುಕ್ತಾಯಗೊಂಡು ಮತ್ತೆ ದಿನಾಂಕ : 17–12–2014 ರಂದು ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಸದನದಲ್ಲಿ ಮಂಡಿಸಲಾದ ಉತ್ತರಗಳು

(ಅನುಬಂಧ–1)

ರೈತರ ಸಹಭಾಗಿತ್ವದಲ್ಲಿ ಹೊಸ ಬಡಾವಣೆ ನಿರ್ಮಿಸುವುದು

1098 (1907) ಶ್ರೀ ಅಬ್ಬಯ್ಯ ಪ್ರಸಾದ್ (ಹುಬ್ಬಳ್ಳಿ–ಧಾರವಾಡ ಪೂರ್ವ):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :–

(ಅ) 2010 ರಿಂದ ಇಲ್ಲಿಯವರೆಗೆ ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ ರೈತರ ಸಹಭಾಗಿತ್ವದಲ್ಲಿ ಎಷ್ಟು ವಸತಿ ಬಡಾವಣೆಗಳನ್ನು ನಿರ್ಮಿಸಿದೆ ; (ವಿವರ ನೀಡುವುದು)

(ಆ) ಈ ಅವಧಿಯಲ್ಲಿ ರೈತರ ಸಹಭಾಗಿತ್ವದಲ್ಲಿ ಎಷ್ಟು ಖಾಸಗಿ ವಿನ್ಯಾಸಗಳಿಗೆ ಪ್ರಾಧಿಕಾರದಿಂದ ಮಂಜೂರಾತಿ ನೀಡಲಾಗಿದೆ ; (ವಿವರ ನೀಡುವುದು)

(ಇ) ಹಾಗಿದ್ದಲ್ಲಿ, ವಸತಿ ವಿನ್ಯಾಸ ರಚಿಸಲು ರೈತರೇಕೆ ಮುಂದೆ ಬರುತ್ತಿಲ್ಲ ಹಾಗೂ ಯಾವ ಅನುಪಾತದಲ್ಲಿ ವಸತಿ ವಿನ್ಯಾಸ ರಚಿಸಲಾಗಿದೆ ;

(ಈ) ರೈತರಿಗೆ ಶೇ. 60 ಹಾಗೂ ಪ್ರಾಧಿಕಾರಕ್ಕೆ ಶೇ. 40ರ ಅನುಪಾತದಲ್ಲಿ ವಸತಿ ವಿನ್ಯಾಸ ರಚಿಸಿದರೆ ಸರ್ಕಾರಕ್ಕಿರುವ ತೊಂದರೆ ಏನು ?

ಶ್ರೀ ವಿನಯಕುಮಾರ್ ಸೊರಕೆ (ಮಾನ್ಯ ನಗರಾಭಿವೃದ್ಧಿ ಸಚಿವರು) :–

(ಅ) 2010 ರಿಂದ ಇಲ್ಲಯವರೆಗೆ ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಿಂದ ರೈತರ ಸಹಭಾಗಿತ್ವ ಯೋಜನೆಯಲ್ಲಿ 01 ವಸತಿ ಬಡಾವಣೆಯನ್ನು ನಿರ್ಮಿಸಲಾಗಿದೆ.

ಧಾರವಾಡ ತಾಲ್ಲೂಕು ತಡಸಿನಕೊಪ್ಪ ಗ್ರಾಮದಲ್ಲಿ ರೈತರ ಸಹಭಾಗಿತ್ವದಲ್ಲಿ 50 ಎಕರೆ 00 ಗುಂಟೆ ಜಮೀನಿನಲ್ಲಿ ವಸತಿ ವಿನ್ಯಾಸ ರಚಿಸಿ ಅಭಿವೃದ್ದಿಪಡಿಸಲಾಗಿದೆ.

(ಆ) ರೈತರ ಸಹಭಾಗಿತ್ವದಲ್ಲಿ ಖಾಸಗಿ ವಿನ್ಯಾಸಗಳಿಗೆ ಪ್ರಾಧಿಕಾರದಿಂದ ಅನುಮೋದನೆ ನೀಡಲು ನಿಯಮಗಳಲ್ಲಿ ಅವಕಾಶ ಇರುವುದಿಲ್ಲ.

(ಇ) ಖಾಸಗಿ ವಿನ್ಯಾಸ ಅನುಮೋದನೆ ನೀಡುವ ಸಮಯದಲ್ಲಿ ಶೇ. 55 ರಷ್ಟು ನಿವೇಶನ ಕ್ಷೇತ್ರಕ್ಕೆ ಅನುಮೋದನೆ ನೀಡಲಾಗುತ್ತದೆ. ಪ್ರಾಧಿಕಾರದಿಂದ ರಚಿಸುವ ವಿನ್ಯಾಸಗಳಲ್ಲಿ ಶೇ. 45 ಕ್ಕಿಂತ ಕಡಿಮೆ ನಿವೇಶನ ಕ್ಷೇತ್ರಕ್ಕೆ ಅನುಮೋದನೆ ನೀಡಲಾಗುತ್ತಿದೆ. ಪ್ರಾಧಿಕಾರದಿಂದ ರಚಿಸುವ ವಸತಿ ವಿನ್ಯಾಸಗಳಲ್ಲಿ ನಿವೇಶನ ಕ್ಷೇತ್ರ 45 ಕ್ಕಿಂತ ಕಡಿಮೆ ಕ್ಷೇತ್ರ ನೀಡಿ ಅನುಮೋದನೆ ನೀಡುತ್ತಿರುವುದರಿಂದ ಪ್ರಾಧಿಕಾರದಿಂದ ರೈತರ ಸಹಭಾಗಿತ್ವದಲ್ಲಿ ವಸತಿ ವಿನ್ಯಾಸ ರಚಿಸಲು ಮುಂದೆ ಬರುತ್ತಿಲ್ಲ.

ರೈತರ ಸಹಭಾಗಿತ್ವ ಯೋಜನೆ 60 : 40 ರ ಅನುಪಾತದಲ್ಲಿ ತಡಸಿನಕೊಪ್ಪ ಗ್ರಾಮದ 50 ಎಕರೆ ಜಮೀನಿನಲ್ಲಿ ವಸತಿ ವಿನ್ಯಾಸ ರಚಿಸಲಾಗಿದೆ.

(ಈ) ಸಾರ್ವಜನಿಕ ಹಿತದೃಷ್ಟಿಯಿಂದ ನಿವೇಶನರಹಿತರಿಗೆ ಕಡಿಮೆ ದರದಲ್ಲಿ ನಿವೇಶನಗಳನ್ನು ಒದಗಿಸುವ ಉದ್ದೇಶದಿಂದ ಹಾಗೂ ಪ್ರಾಧಿಕಾರದ ಆರ್ಥಿಕ ಹಿತದೃಷ್ಟಿಯಿಂದ, ಆರ್ಥಿಕ ದುರ್ಬಲರು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ಮೀಸಲಿಟ್ಟು ಪ್ರಾಧಿಕಾರಕ್ಕೆ 60 ಹಾಗೂ ರೈತರಿಗೆ 40ರ ಅನುಪಾತದಲ್ಲಿ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ನೀಡಲಾಗುತ್ತಿದ್ದು, ರೈತರಿಗೆ ಶೇ. 60 ರಷ್ಟು ಹಾಗೂ ಶೇ. 40 ರಷ್ಟು ಪ್ರಾಧಿಕಾರಕ್ಕೆ ಉಳಿಸಿಕೊಂಡಲ್ಲಿ ಪ್ರಾಧಿಕಾರಕ್ಕೆ ಆರ್ಥಿಕ ನಷ್ಟ ಉಂಟಾಗುವ ಸಾಧ್ಯತೆ ಇರುತ್ತದೆ.

ಭೂ ಮಾಲೀಕರ/ರೈತರ ಹಿತದೃಷ್ಟಿಯಿಂದ ಹಾಲಿ ಇರುವ ರೈತರ ಸಹಭಾಗಿತ್ವ ಯೋಜನೆ 60:40 ರ ಬದಲಿಗೆ 50:50ಕ್ಕೆ ಹೆಚ್ಚಳ ಮಾಡುವ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.

ಹೊಸ ಬಡಾವಣೆ ನಿರ್ಮಿಸುವುದು

1100 (1909) ಶ್ರೀ ಅಬ್ಬಯ್ಯ ಪ್ರಸಾದ್ (ಹುಬ್ಬಳ್ಳಿ–ಧಾರವಾಡ ಪೂರ್ವ):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :–

(ಅ) 2010 ರಿಂದ ಇಲ್ಲಿಯವರೆಗೆ ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ ಎಷ್ಟು ಬಡಾವಣೆಗಳನ್ನು ನಿರ್ಮಿಸಿದೆ ;